ಸಮಾಚಾರ ಸಣ್ಣದಲ್ಲ

ಅತ್ಯಾಚಾರ: ಬಾಲಕಿ 9 ತಿಂಗಳ ಗರ್ಭಿಣಿ

ಬಟಿಂಡಾ: ಇಲ್ಲಿನ ಹರದೇವ್ ನಗರದ ಕೊಳಚೆ ಪ್ರದೇಶದ 16 ವರ್ಷದ ಬಾಲಕಿಯೊಬ್ಬಳು ನೆರೆ ಮನೆ ಯಾತನಿಂದ ದೌರ್ಜನ್ಯಕ್ಕೆ ಒಳಗಾಗಿದ್ದು, ಇದೀಗ 9 ತಿಂಗಳ ಗರ್ಭಿಣಿಯಾಗಿದ್ದಾಳೆ ಆಕೆಯ ಮೇಲೆ ಅತ್ಯಾಚಾರವಾಗಿದೆ ಎಂದು ಬಾಲಕಿಯ ತಾಯಿ ದೂರು ನೀಡಿದ್ದಾರೆ. ಬಾಲಕಿಯ ತಂದೆ ಕೆಲ ವರ್ಷಗಳ ಹಿಂದೆ ಅಸುನೀಗಿದ್ದು, ತಾಯಿ ರಸ್ತೆ ಬದಿಯಲ್ಲಿ ಕೃತಕ ಆಭರಣಗಳ ವ್ಯಾಪಾರ ನಡೆಸಿ ಜೀವನ ನಿರ್ವಹಿಸುತ್ತಿದ್ದರು. ಮಗಳು ನೀರು ತರಲು ಸಾರ್ವಜನಿಕ ಕೊಳಾಯಿ ಬಳಿ ತೆರಳಿದ್ದಾಗ ನೆರೆ ಮನೆಯ ವಿವಾಹಿತ ವ್ಯಕ್ತಿ ಬೆದರಿಕೆಯೊಡ್ಡಿ ಅತ್ಯಾಚಾರ ನಡೆಸಿದ್ದಾನೆ ಎಂದು ತಾಯಿ ಆರೋಪಿಸಿದ್ದಾರೆ. ಬಾಲಕಿ ಗರ್ಭಿಣಿ ಎಂದು ತಾಯಿಗೂ ತಿಳಿದಿರಲಿಲ್ಲ ಆಕೆ ತೀವ್ರ ಹೊಟ್ಟೆನೋವಿನಿಂದ ಬಳಲಿದಾಗ ಆಸ್ಪತ್ರೆಗೆ ಕರೆತರಲಾಯಿತು ವೈದ್ಯರು ತಪಾಸಣೆ ನಡೆಸಿದಾಗ ಹೆರಿಗೆ ನೋವು ಎಂದು ತಿಳಿದುಬಂದಿದೆ. ಸಂಬಂಧಪಟ್ಟ ಠಾಣೆಯ ಪೊಲೀಸರು ದೂರು ದಾಖಲಿಸಿಕೊಂಡಿದ್ದು ತನಿಖೆಗೆ ಮುಂದಾಗಿದ್ದಾರೆ.

ಇಂದ್ರಾಣಿ ಪ್ರಶ್ನಿಸಲು ಸಿಬಿಐಗೆ ಅನುಮತಿ

ಮುಂಬೈ: ಐಎನ್‌ಎಕ್ಸ್ ಮಾಧ್ಯಮ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದ್ರಾಣಿ ಮುಖರ್ಜಿಗೆ ಪ್ರಶ್ನೆ ಮಾಡಲು ಸಿಬಿಐಗೆ ವಿಶೇಷ ನ್ಯಾಯಾಲಯ ಅನುಮತಿ ನೀಡಿದೆ. ಈ ಪ್ರಕರಣದಲ್ಲಿ ಮಾಜಿ ಕೇಂದ್ರ ಹಣಕಾಸು ಸಚಿವ ಪಿ. ಚಿದಂಬರಂ ಅವರು ಈಗಾಗಲೇ ಬಂಧನಕ್ಕೆ ಒಳಗಾಗಿದ್ದಾರೆ. ಮಗಳ ಕೊಲೆ ಪ್ರಕರಣದಲ್ಲಿ ಆರೋಪಿಗಳಾಗಿ ಜೈಲಿನಲ್ಲಿರುವ ಇಂದ್ರಾಣಿ ಮುಖರ್ಜಿ ಮತ್ತು ಅವರ ಪತಿ ಪೀಟರ್ ಮುಖರ್ಜಿ ಅವರುಗಳು ಐಎನ್‌ಎಕ್ಸ್ ಮೀಡಿಯಾ ಗ್ರೂಪ್‌ನ ಮಾಜಿ ಪ್ರವರ್ತಕರಗಿದ್ದಾರೆ. ಚಿದಂಬರಂ ಮತ್ತು ಅವರ ಪುತ್ರ ಕಾರ್ತಿ ವಿರುದ್ಧ ಇಂದ್ರಾಣಿ ಮುಖರ್ಜಿ ಅವರು ತಪ್ಪೊಪ್ಪಿಗೆಯ ಹೇಳಿಕೆ ದಾಖಲಿಸಿದ್ದರು. ಇದರ ಆಧಾರದ ಮೇಲೆ ಚಿದಂಬರಂ ಅವರನ್ನು ಬಂಧಿಸಲಾಗಿತ್ತು. ಭ್ರಷ್ಟಾಚಾರ ಪ್ರಕರಣದ ಭಾಗವಾಗಿ ಕೆಲವು ಹಣಕಾಸು ವಹಿವಾಟುಗಳ ಬಗ್ಗೆ ಸ್ಪಷ್ಟತೆ ಬೇಕಿದ್ದು ಇದಕ್ಕಾಗಿ ಇಂದ್ರಾಣಿ ಮುಖರ್ಜಿ ಅವರನ್ನು ಪ್ರಶ್ನಿಸಲು ನ್ಯಾಯಾಲಯದ ಅನುಮತಿ ಕೋರಿತ್ತು.

ಏಕಾದಶಿಯಂದು ಉಡಾವಣೆಯಿಂದ ಅಮೆರಿಕ ಯಶಸ್ಸು

ದೆಹಲಿ: ಚಂದ್ರನಲ್ಲಿಗೆ ಅಮೆರಿಕಾ ಕಳುಹಿಸಿದ 39ನೇ ಉಪಗ್ರಹ ಯಶಸ್ವಿಯಾಗಲು ಅದನ್ನು ಅವರು ಏಕಾದಶಿಯಂದು ಉಡವಾಣೆ ಮಾಡಿದ್ದೇ ಕಾರಣ ಎಂದು ಆರ್‌ಎಸ್‌ಎಸ್ ಮಾಜಿ ಸ್ವಯಂ ಸೇವಕ ಸಂಘದ ಕಾರ್ಯದರ್ಶಿ ಸಂಭಾಜಿ ಭಿಡೆ ಹೇಳಿದ್ದಾರೆ. ಚಂದ್ರಯಾನ 2 ಯೋಜನೆಯ ವಿಕ್ರಂ ಲ್ಯಾಂಡರ್ ಚಂದ್ರನಲ್ಲಿ ಇಳಿಯುತ್ತಿದ್ದಂತೆ ಸಂಪರ್ಕ ಕಡಿದುಕೊಂಡ ನಂತರ ಈ ಹೇಳಿಕೆಯನ್ನು ನೀಡಿದ್ದಾರೆ. ಮಹಾರಾಷ್ಟ್ರದ ಶೋಲಾಪುರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಭಿಡೆ, ಚಂದ್ರಯಾನ ಕುರಿತು ಅಮೆರಿಕ 38 ಮೂನ್ ಮಿಷನ್ ನಡೆಸಿದ್ದರೂ, ಅದು ಯಶಸ್ವಿಯಾಗಲಿಲ್ಲ, ಸತತ ಪ್ರಯತ್ನದ ನಂತರ ಯಶಸ್ಸನ್ನು ಕಂಡಿತು. ಇದಕ್ಕೆ ಕಾರಣ ಭಾರತೀಯ ಕಾಲಮಾನವನ್ನು ಆಶ್ರಯಿಸಿದರು. ಇದರ ಫಲವಾಗಿ, ಅಮೆರಿಕಾ ತನ್ನ 39 ನೇ ಮೂನ್ ಮಿಷನ್ ಕಾರ್ಯಾಚರಣೆಯನ್ನು ಏಕಾದಶಿ ತಿಥಿ ದಿನದಂದು ನಡೆಸಿ ಯಶಸ್ವಿಯಾಯಿತು ಎಂದು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ಟೆಸ್ಟ್‌ನಲ್ಲಿ ರೋಹಿತ್ ಆರಂಭಿಕರಾಗಿ ಆಡಬಹುದು

ದೆಹಲಿ: ಲೋಕೇಶ್ ರಾಹುಲ್ ಅವರು ಟೆಸ್ಟ್‌ನಲ್ಲಿ ರನ್ ಕಲೆ ಹಾಕುವಲ್ಲಿ ವಿಫಲರಾದ ಹಿನ್ನೆಲೆ, ರೋಹಿತ್ ಶರ್ಮಾ ಅವರನ್ನು ಆರಂಭಿಕರಾಗಿ ಕಣಕ್ಕಿಳಿಸಲು ಚಿಂತನೆ ನಡೆದಿದೆ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣಾ ಮಂಡಳಿಯ ಮುಖ್ಯ ಆಯ್ಕೆದಾರ ಎಂಎಸ್‌ಕೆ ಪ್ರಸಾದ್ ಹೇಳಿದ್ದಾರೆ.

ವೆಸ್ಟ್ ಇಂಡೀಸ್ ವಿರುದ್ಧ ರಾಹುಲ್ ಸ್ಥಿರ ಪ್ರದರ್ಶನ ನೀಡುವಲ್ಲಿ ವಿಫಲರಾಗಿದ್ದಾರೆ. ವಿಂಡೀಸ್ ವಿರುದ್ಧದ ಎರಡು ಟೆಸ್ಟ್ ಪಂದ್ಯಗಳ ನಾಲ್ಕು ಇನ್ನಿಂಗ್ಸ್‌ಗಳಲ್ಲಿ 44, 38, 13 ಮತ್ತು ಆರು ರನ್ ಗಳಿಸಿ ನಿರಾಸೆ ಅನುಭವಿಸಿದ್ದಾರೆ.

ವೆಸ್ಟ್ ಇಂಡೀಸ್ ಪ್ರವಾಸದ ನಂತರ ಆಯ್ಕೆ ಸಮಿತಿ ಸಭೆ ನಡೆದಿಲ್ಲ. ನಾವು ಸಭೆ ಸೇರಿದಾಗೆಲ್ಲಾ ರೋಹಿತ್ ಅವರನ್ನು ಟೆಸ್ಟ್‌ನಲ್ಲಿ ಆರಂಭಿಕರಾಗಿ ಕಣಕ್ಕೆ ಇಳಿಸುವ ಬಗ್ಗೆ ಚರ್ಚೆ ನಡೆಸುತ್ತೇವೆ ಎಂದಿದ್ದಾರೆ.

ರಾಹುಲ್ ಉತ್ತಮ ಆಟಗಾರ ಎಂಬುದರಲ್ಲಿ ಸಂದೇಹವಿಲ್ಲ ಎಂದು ಅವರು ಹೇಳಿದ್ದಾರೆ. ಪ್ರಸ್ತುತ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಲಯ ಕಂಡು ಕೊಳ್ಳಲು ಹೆಣಗಾಟ ನಡೆಸಿದ್ದಾರೆ. ಅವರು ಕ್ರೀಸ್‌ನಲ್ಲಿ ಹೆಚ್ಚು ಹೆಚ್ಚು ಸಮಯ ಕಳೆದು ಲಯಕ್ಕೆ ಮರಳಬಹುದು ಎಂದು ಪ್ರಸಾದ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇದಕ್ಕೂ ಮುನ್ನ ಮಾಜಿ ನಾಯಕ ಸೌರಭ್ ಗಂಗೂಲಿ ಅವರು ರೋಹಿತ್‌ಗೆ ಟೆಸ್ಟ್‌ನಲ್ಲಿ ಆರಂಭಿಕರಾಗಿ ಕಣಕ್ಕೆ ಇಳಿಸುವಂತೆ ಒತ್ತಾಯಿಸಿದ್ದರು. ರೋಹಿತ್ ಶರ್ಮಾ ಇದೇ ವರ್ಷ ಜುಲೈನಲ್ಲಿ ನಡೆದ ಐಸಿಸಿ ವಿಶ್ವಕಪ್ ಟೂರ್ನಿಯಲ್ಲಿ ಭರ್ಜರಿ ಪ್ರದರ್ಶನ ನೀಡಿ ಎಲ್ಲರ ಗಮನ ಸೆಳೆದಿದ್ದಾರೆ. ಅಲ್ಲದೆ ಅವರು ವೆಸ್ಟ್ ಇಂಡೀಸ್ ಪ್ರವಾಸದಲ್ಲಿ ಟೆಸ್ಟ್ ತಂಡದಲ್ಲಿ ಸ್ಥಾನ ಪಡೆದಿದ್ದರು.

ವಿರಾಟ್‌ಕೊಹ್ಲಿ - ರೋಹಿತ್‌ಶರ್ಮಾ ನಡುವೆ ಭಿನ್ನಾಭಿಪ್ರಾಯವಿಲ್ಲ

ದೆಹಲಿ: ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಹಾಗೂ ಉಪನಾಯಕ ರೋಹಿತ್ ಶರ್ಮಾ ಅವರ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ ಎಂದು ಟೀಮ್ ಇಂಡಿಯಾದ ಮುಖ್ಯ ಕೋಚ್ ರವಿ ಶಾಸ್ತ್ರಿ ಸ್ಪಷ್ಟಪಡಿಸಿದ್ದಾರೆ.

ನಾನು ಕಳೆದ ಐದು ವರ್ಷಗಳಿಂದ ಭಾರತೀಯ ಡ್ರೆಸ್ಸಿಂಗ್ ರೂಮ್‌ನ ಭಾಗವಾಗಿದ್ದೇನೆ. ಅಲ್ಲಿನ ಸದಸ್ಯರು ತಂಡದ ಆಟಗಾರರನ್ನು ಹುರಿದುಂಬಿಸುವುದು ಮತ್ತು ಅವರ ಜವಾಬ್ದಾರಿಗಳನ್ನು ಅರಿತುಕೊಳ್ಳುವುದನ್ನು ನೋಡಿದ್ದೇನೆ. ವಿವಾದದ ಸುದ್ದಿ ಸಂಪೂರ್ಣವಾಗಿ ಆಧಾರರಹಿತವಾಗಿದೆ ಎಂದು ತಿಳಿಸಿದ್ದಾರೆ.

ಇಬ್ಬರ ಮಧ್ಯ ವೈಮನಸ್ಸು ಇದ್ದಿದ್ದರೇ ವಿಶ್ವಕಪ್‌ನಲ್ಲಿ ರೋಹಿತ್ ಐದು ಶತಕಗಳನ್ನು ಹೇಗೆ ಬಾರಿಸತ್ತಿದ್ದರು. ಡ್ರೆಸ್ಸಿಂಗ್ ರೂಮ್ ತಂಡದ ಒಳಿತಿಗಾಗಿ ಯಾವುದೇ ಹಿಂಜರಿಕೆಯಿಲ್ಲದೆ ಆಟಗಾರರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸ್ಥಳವಾಗಿದೆ ಎಂದಿದ್ದಾರೆ.

ಸದ್ಯದ ಭಾರತ ತಂಡ ಭರ್ಜರಿ ಪ್ರದರ್ಶನ ನೀಡುತ್ತಿದೆ. ನಮ್ಮ ತಂಡ ಸಹ 1980ರ ವಿಂಡೀಸ್ ಹಾಗೂ 2000ರ ಆರಂಭದಲ್ಲಿನ ಆಸ್ಟ್ರೇಲಿಯಾ ತಂಡದಂತೆ ಆಗಬಹುದು. ಈ ತಂಡದ ಹತ್ತಿರ ತಾನು ಶ್ರೇಷ್ಠ ಪ್ರದರ್ಶನ ನೀಡುವ ತಂಡ ಎಂದು ತಿಳಿಸುವ ಅವಕಾಶಗಳು ಹೆಚ್ಚಿವೆ ಎಂದು ಹೇಳಿದ್ದಾರೆ.

ಟೆಸ್ಟ್ ಶ್ರೇಯಾಂಕ ಅಗ್ರಸ್ಥಾನದಲ್ಲಿ ಸ್ಮಿತ್

ದುಬೈ: ಆಸ್ಟ್ರೇಲಿಯಾ ಸ್ಟಾರ್ ಆಟಗಾರ ಸ್ಟೀವನ್ ಸ್ಮಿತ್ ಇಂಗ್ಲೆಂಡ್ ವಿರುದ್ಧ ಟೆಸ್ಟ್ ಸರಣಿಯ ನಾಲ್ಕನೇ ಪಂದ್ಯದಲ್ಲಿ ಬಾರಿಸಿದ ದ್ವಿಶತಕದಿಂದ ಅಂತಾರಾಷ್ಟ್ರೀಯ ಕ್ರಿಕೆಟ್ ಸಮಿತಿಯ ಶ್ರೇಯಾಂಕ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಮುಂದುವರಿದಿದ್ದು, ಟೀಮ್ ಇಂಡಿಯಾದ ವಿರಾಟ್ ಕೊಹ್ಲಿ ಹಾಗೂ ವೇಗಿ ಜಸ್ಪ್ರಿತ್ ಬುಮ್ರಾ ಅವರ ಶ್ರೇಯಾಂಕ ಸ್ಥಿರವಾಗಿದೆ.

ಸ್ಮಿತ್ 937 ಅಂಕಗಳೊಂದಿಗೆ ಮೊದಲ ಸ್ಥಾನ, ವಿರಾಟ್ ಕೊಹ್ಲಿ 903 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ಚೇತೇಶ್ವರ್ ಪೂಜಾರ ಹಾಗೂ ಅಜಿಂಕ್ಯ ರಹಾನೆ ಅಗ್ರ 10ರಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾರೆ. ಆಸೀಸ್ ವೇಗಿ ಪ್ಯಾಟ್ ಕಮಿನ್ಸ್ 914 ಅಂಕಗಳೊಂದಿಗೆ ಬೌಲಿಂಗ್ ವಿಭಾಗದಲ್ಲಿ ಮೊದಲ ಸ್ಥಾನದಲ್ಲಿದ್ದಾರೆ. ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ 851 ಅಂಕಗಳೊಂದಿಗೆ ಎರಡು, ಟೀಮ್ ಇಂಡಿಯಾದ ಜಸ್ಪ್ರಿತ್ ಬುಮ್ರಾ 835 ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ.

ವೀಕ್ಷಕ ವಿವರಣೆ: ಎಐಆರ್-ಬಿಸಿಸಿಐ ಒಪ್ಪಂದ

ದೆಹಲಿ: ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ದೇಶದಲ್ಲಿ ನಡೆಯುವ ಕ್ರಿಕೆಟ್ ಪಂದ್ಯಗಳಿಗೆ ಹೆಚ್ಚಿನ ಜನಪ್ರಿಯತೆ ನೀಡುವ ಹಾಗೂ ಜನರನ್ನು ತಲುಪುವ ಹಂಬಲದಿಂದ ಆಲ್ ಇಂಡಿಯಾ ರೇಡಿಯೊ (ಎಐಆರ್) ದೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ರೇಡಿಯೊದೊಂದಿಗೆ ಬಿಸಿಸಿಐ ಎರಡು ವರ್ಷಗಳ ಒಪ್ಪಂದಕ್ಕೆ ಸಹಿ ಹಾಕಿದೆ, ಅದರ ಅಡಿಯಲ್ಲಿ ಪಂದ್ಯಗಳ ವೀಕ್ಷಕ ವಿವರಣೆ ಆಕಾಶವಾಣಿಯಲ್ಲಿ ಕೇಳಬಹುದು. ದೂರದ ಪ್ರದೇಶಗಳಲ್ಲಿ ವಾಸಿಸುವ ಲಕ್ಷಾಂತರ ಕ್ರಿಕೆಟ್ ಪ್ರಿಯರನ್ನು ತಲುಪಿ ಅವರಿಗೆ ಮುದ ನೀಡುವ ಇರಾದೆ ಬಿಸಿಸಿಐಯದ್ದಾಗಿದೆ. ಆಕಾಶವಾಣಿಯ ಒಪ್ಪಂದದ ಪ್ರಕಾರ, ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಸರಣಿಯ ಮೊದಲ ಟಿ -20 ಪಂದ್ಯದ ನೇರ ವೀಕ್ಷಕ ವಿವರಣೆ ನೀಡಲಾಗುವುದು. ಈ ಪಂದ್ಯವು ಧರ್ಮಶಾಲಾದಲ್ಲಿ ನಡೆಯಲಿದೆ.ಆಕಾಶವಾಣಿಯಲ್ಲಿ ಅಂತಾರಾಷ್ಟ್ರೀಯ ಪಂದ್ಯಗಳ ಹೊರತಾಗಿ, ಪುರುಷರ ಮತ್ತು ಮಹಿಳಾ ಕ್ರಿಕೆಟ್ ತಂಡಗಳ ದೇಶೀಯ ಪಂದ್ಯಗಳನ್ನು ಸಹ ನೇರ ಪ್ರಸಾರ ಮಾಡಲಿದೆ. ಬಿಸಿಸಿಐ ಮತ್ತು ಎಐಆರ್ ನಡುವಿನ ಒಪ್ಪಂದವು 2019 ರ ಸೆಪ್ಟೆಂಬರ್ 10 ರಿಂದ 2021 ಆಗಸ್ಟ್ 21 ರವರೆಗೆ ಇರಲಿದೆ.

ಅ.8 ರಂದು ಮೊದಲ ರಫೇಲ್ ಭಾರತಕ್ಕೆ

ದೆಹಲಿ: ಫ್ರಾನ್ಸ್ ಮೊದಲ ರಫೇಲ್ ಫೈಟರ್ ಜೆಟ್‌ಅನ್ನು ಅಕ್ಟೋಬರ್ 8 ರಂದು ಭಾರತೀಯ ವಾಯುಪಡೆಗೆ (ಐಎಎಫ್) ಹಸ್ತಾಂತರಿಸಲಿದೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ಔಪಚಾರಿಕ ಹಸ್ತಾಂತರ ಸಮಾರಂಭವು ಫ್ರಾನ್ಸ್‌ನ ಮೆರಿಗ್ನಾಕ್‌ನಲ್ಲಿ ನಡೆಯಲಿದ್ದು, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗವಹಿಸಲಿದ್ದಾರೆ.

ಅಕ್ಟೋಬರ್ 8 ಎರಡು ಕಾರಣಗಳಿಗಾಗಿ ಶುಭ. ಆ ದಿನ ದಸರಾ ಮತ್ತು ವಾಯುಪಡೆಯ ದಿನ. ಜೆಟ್‌ಅನ್ನು ಔಪಚಾರಿಕವಾಗಿ ಐಎಎಫ್ ಗೆ ಹಸ್ತಾಂತರಿಸಲು ಅದು ಒಂದು ಕಾರಣವಾಗಿರಬಹುದು ಎಂದು ಅವರು ಹೇಳಿದರು.

ಔಪಚಾರಿಕವಾಗಿ ಅಕ್ಟೋಬರ್ 8ರಂದು ನಡೆಯಲಿದ್ದರೆ, ನಾಲ್ಕು ಜೆಟ್‌ಗಳ ಮೊದಲ ಬ್ಯಾಚ್ ಮುಂದಿನ ಏಪ್ರಿಲ್-ಮೇ ತಿಂಗಳಲ್ಲಿ ಭಾರತದ ನೆಲೆ ಸೇರಲಿವೆ. ಎಲ್ಲಾ 36 ಫೈಟರ್ ಜೆಟ್‌ಗಳು ಸೆಪ್ಟೆಂಬರ್ 2022ರೊಳಗೆ ಬರಲಿವೆ. ಸೆಪ್ಟೆಂಬರ್ 23, 2016ರಂದು ಭಾರತವು ಫ್ರಾನ್ಸ್‌ನಿಂದ 36 ರಾಫೆಲ್ ಜೆಟ್‌ಗಳ ಖರೀದಿಯ 59,000 ಕೋಟಿ ರೂ.ಗಳ ಒಪ್ಪಂದಕ್ಕೆ ಸಹಿ ಹಾಕಿತ್ತು. ಇದು 2019ರ ಲೋಕಸಭಾ ಚುನಾವಣೆಗೆ ಮುನ್ನ ರಾಜಕೀಯ ವಿವಾದದ ಕೇಂದ್ರಬಿಂದುವಾಗಿತ್ತು.

ಭಾರತ ಎ ಗೆ ಎರಡನೇ ದಿನದ ಗೌರವ

ತಿರುವನಂಪುರಂ: ಶುಭ್ ಮನ್ ಗಿಲ್ (90 ರನ್) ಹಾಗೂ ಜಲಜ್ ಸಕ್ಸೆನಾ (61 ರನ್) ಅವರುಗಳ ಭರ್ಜರಿ ಪ್ರದರ್ಶನದ ಬಲದಿಂದ ಭಾರತ 'ಎ' ತಂಡ ಇಲ್ಲಿ ನಡೆದಿರುವ ಅನಧಿಕೃತ ಟೆಸ್ಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ 'ಎ' ವಿರುದ್ಧ ಇನ್ನಿಂಗ್ಸ್ ಮುನ್ನಡೆ ಸಾಧಿಸಿದೆ.

ಮಂಗಳವಾರ 2 ವಿಕೆಟ್ ಗೆ 129 ರನ್ ಗಳಿಂದ ಆಟ ಮುಂದುವರಿಸಿದ ಭಾರತ 303 ರನ್ ಗಳಿಗೆ ಆಲ್ ಔಟ್ ಆಯಿತು. ಇನ್ನಿಂಗ್ಸ್ ಹಿನ್ನಡೆಯೊಂದಿಗೆ ಎರಡನೇ ಇನ್ನಿಂಗ್ಸ್ ಆರಂಭಿಸಿದ ದಕ್ಷಿಣ ಆಫ್ರಿಕಾ ದಿನದ ಅಂತ್ಯಕ್ಕೆ 5 ವಿಕೆಟ್‌ಗೆ 125 ರನ್ ಗಳನ್ನು ಕಲೆ ಹಾಕಿದೆ.

ಭಾರತದ ಪರ ಶುಭ್ ಮನ್ ಗಿಲ್ 153 ಎಸೆತಗಳಲ್ಲಿ 90 ರನ್ ಬಾರಿಸಿ ಔಟ್ ಆದರು. ರಿಕ್ಕಿ ಬುಯಿ 26, ಕೆ.ಎಸ್ ಭರತ್ 33, ಶ್ರಾರ್ದೂಲ್ ಠಾಕೂರ್ 34 ರನ್ ಬಾರಿಸಿ ತಂಡದ ಮೊತ್ತ ಹಿಗ್ಗಿಸಿದರು. ದಕ್ಷಿಣ ಆಫ್ರಿಕಾ ಪರ ಲುಂಗಿ ಗಿಡಿ ಹಾಗೂ ಡೇನ್ ಪೆಡಿಟ್ ತಲಾ ಮೂರು ವಿಕೆಟ್ ಪಡೆದರು.

ಎರಡನೇ ಇನ್ನಿಂಗ್ಸ್ ಆರಂಭಿಸಿದ ದಕ್ಷಿಣ ಆಫ್ರಿಕಾ ತಂಡದ ಆರಂಭ ಕಳಪೆಯಾಗಿತ್ತು. ಮೇಲ್ಪಂಕ್ತಿಯ ಆಟಗಾರರು ರನ್ ಕಲೆ ಹಾಕುವಲ್ಲಿ ವಿಫಲರಾದರು. ಮಧ್ಯಮ ಕ್ರಮಾಂಕದಲ್ಲಿ ಜುಬ್ಯಾರ್ ಹಂಜಾ 44 ರನ್ ಬಾರಿಸಿ ತಂಡಕ್ಕೆ ಆಸರೆಯಾದರು. ಉಳಿದಂತೆ ಹ್ಯಾನ್ರಿ ಕಲ್ಸೇನಾ 35 ಹಾಗೂ ವಿಯಾನ್ ಮುಲ್ಡರ್ 12 ಬುಧವಾರಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.



ಫ್ರಾನ್ಸ್‌ನಲ್ಲಿ ಕೋಳಿ ಜಗಳ!

ಹೀಗೂ ಉಂಟು

ಪ್ಯಾರಿಸ್: ಫ್ರಾನ್ಸಿನಲ್ಲಿ ನಡೆದಿರುವ ಕೋಳಿಜಗಳದ ಸ್ವಾರಸ್ಯಕರ ಕಥೆಯಿದು ಸೇಂಟ್-ಪಿಯರೆ- ಒಲ್ಗಾನ್ ಎಂಬ ಹಳ್ಳಿಯಲ್ಲಿ ವಾಸಿಸುತ್ತಿದ್ದ ಫೇಸ್ಸು ಎಂಬುವವರ ತೋಟದಲ್ಲಿ ಮೌರಿಸ್ ಎಂಬ ಹುಂಜವಿತ್ತು. ಹುಂಜ ದಿನವೂ ಬೆಳಗಿನ ಹೊತ್ತು ತಪ್ಪದೇ ಕೂಗುತ್ತಿತ್ತು. ಇದು ನೆರೆಹೊರೆಯವರಿಗೆ ಕಿರಿ ಕಿರಿ ಎನಿಸುತ್ತಿತ್ತು. ಅದಕ್ಕಾಗಿ ಅವರು ಕೋರ್ಟಿಗೆ ಹೋದರು.

ಆದರೆ ಪಶ್ಚಿಮ ಫ್ರಾನ್ಸ್‌ನ ರಾಷೆಫೋರ್ಟ್ ಕೋರ್ಟಿನವರು ನೆರೆ ಮನೆಯವರ ದೂರನ್ನು ತಿರಸ್ಕರಿಸಿ, ಅದು ಶಬ್ದಮಾಲಿನ್ಯವನ್ನು ಉಂಟುಮಾಡುವುದಿಲ್ಲವೆಂದು ಗುರುವಾರದಂದು ತೀರ್ಪಿತ್ತು, ಸುಮಾರು 1,100 ಅಮೆರಿಕನ್ ಡಾಲರ್(ಸುಮಾರು 77,000ರುಪಾಯಿ)ಗಳಷ್ಟು ದಂಡವನ್ನು ವಿಧಿಸಿದ್ದಾರೆ.

'ನಾನು ಈಗ ನಿರಾಳವಾಗಿದ್ದೇನೆ' ಎಂದು ಅದರ ಒಡತಿ ಫೇಸ್ಸು ಸಿಎನ್‌ಎನ್ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ. ಮೌರಿಸ್ ಎಂಬ ಹುಂಜದ ಪರವಾಗಿ 1.4ಲಕ್ಷ ಸಹಿಗಳನ್ನು ಸಂಗ್ರಹಿಸಿ, ಹಲವಾರು ಮಂದಿ ಹುಂಜಗಳನ್ನು ಕೋರ್ಟಿಗೆ ತಂದಿದ್ದರು. ಆದರೆ ಮೌರಿಸ್ ಮಾತ್ರ ಕೋರ್ಟಿನ ಕಾರ್ಯಕಲಾಪಗಳಿಗೆ ಅಡೆ-ತಡೆಯೊಡ್ಡಬಹುದು ಎಂಬ ಉದ್ದೇಶದಿಂದ ಬಂದಿರಲಿಲ್ಲ.

ನ್ಯಾಯಾಲಯದ ತೀರ್ಪು ಸಾಮಾನ್ಯ ತಿಳಿವಳಿಕೆಯಿಂದ ಕೂಡಿದೆ ಅಲ್ಲದೆ, ಹುಂಜದ ಕೂಗು ಫ್ರಾನ್ಸ್‌ನ ಸಂಪ್ರದಾಯವನ್ನು ಉಳಿಸಿದೆ ಎಂದು ಅದು ತಿಳಿಸಿದೆ. ಕೋರ್ಟ್‌ನಲ್ಲಿ ಮೊಕದ್ದಮೆ ನಡೆಯುವಾಗ ಮೌರಿಸ್ ಮೌನಾವಾಗುಳಿದಿತ್ತು. ಕಳೆದ ಕೆಲವು ತಿಂಗಳುಗಳಿಂದ ಮಾನಸಿಕವಾಗಿ ಅಸ್ವಸ್ಥವಾಗಿತ್ತು. ಸಾಕಷ್ಟು ಜನ ಅದನ್ನು ನೋಡಲು ಮನೆಗೆ ಬರುತ್ತಿದ್ದರು ಎಂದು ಆಕೆ ಹೇಳಿದರು.

ಈಗ ಅದರ ಧ್ವನಿಯು ಮತ್ತೆ ಬಂದಿದೆ. ಕೂಗುವುದು ಸ್ವಾಭಾವಿಕ. ಅಲ್ಲದೆ ನಸುಕಿನಲ್ಲಿ ಕೂಗುವುದು ಹುಂಜದ ಆಕಾಂಕ್ಷೆ ಎಂದು ಆಕೆ ಹೇಳಿದರು.

ವಿಕ್ರಮ್ ಸಂಪರ್ಕಕ್ಕೆ ನಾಸಾ ನಾನಾ ಕ್ರಮ

ಚೆನ್ನೈ: ಚಂದ್ರಯಾನ 2 ರ ವಿಕ್ರಮ್ ಲ್ಯಾಂಡರ್‌ನ ಸಂಪರ್ಕ ಕೊನೆಗಳಿಗೆಯಲ್ಲಿ ಕಡಿದು ಹೋಗಿದ್ದು, ಅನಂತರ ಆರ್ಬಿಟರ್ ಅದನ್ನು ಪತ್ತೆ ಮಾಡಿದ್ದು ಈಗ ಇತಿಹಾಸ.ಆದರೆ ಅದರ ಸಂಪರ್ಕ ಸಾಧಿಸುವುದೇ ಈಗಿರುವ ಸವಾಲು. ಲ್ಯಾಂಡರ್‌ನ ಆಯುಷ್ಯವೇ 14 ದಿನ .ಆ ಪೈಕಿ 4 ದಿನಗಳು ಕಳೆದು ಹೋಗಿವೆ. ಇನ್ನುಳಿದ ಅವಧಿಯಲ್ಲಿ ಈ ಕಾರ್ಯ ಸಾಧ್ಯವಾಗಲಿದೆಯೇ ಎಂಬುದು ಈಗಿನ ಪ್ರಶ್ನೆ.

ಈ ಹಿನ್ನೆಲೆಯಲ್ಲಿ ಸಂಪರ್ಕ ಸಾಧಿಸಲು ಯಾವ ರೀತಿಯ ಪ್ರಯತ್ನ ಸಾಗಿದೆ ಎಂಬುದರತ್ತ ಒಂದು ನೋಟ.

ತರಂಗಾಂತರದ ಮೂಲಕ ಸಂದೇಶ

ವಿಕ್ರಮ ಲ್ಯಾಂಡರ್ ಯಾವ ತರಂಗಾಂತರದಲ್ಲಿ ಸಂಪರ್ಕ ಮಾಡುತ್ತಿತ್ತು ಎಂಬುದು ಇಸ್ರೊಗೆ ಗೊತ್ತು.ಹೀಗಾಗಿ ಅದೇ ತರಂಗಾಂತರದ ಮೂಲಕವೇ ಪ್ರತಿ ದಿನ ಸಂದೇಶದ ಆದೇಶಗಳನ್ನು ರವಾನಿಸುತ್ತಿದೆ. ಇದಕ್ಕೆ ಪ್ರತ್ಯುತ್ತರ ಬರಬಹುದೇ ಎಂದು ಕಾಯುತ್ತಿದೆ. ಬೆಂಗಳೂರು ಬಳಿಯ ಬ್ಯಾಲಾಳುವಿನಲ್ಲಿ ಸ್ಥಾಪಿಸಲಾಗಿರುವ 32 ಮೀಟರ್‌ನ ಆಂಟೆನಾವನ್ನು ಇದಕ್ಕಾಗಿ ಬಳಸಲಾಗುತ್ತಿದೆ. ಆರ್ಬಿಟರ್ ಮೂಲಕ ವಿಕ್ರಮನನ್ನು ಸಂಪರ್ಕಿಸುವ ಮತ್ತೊಂದು ಮಾರ್ಗವನ್ನೂ ಅನುಸರಿಸುತ್ತಿದೆ.ಆದರೆ ಯಾವುದೂ ಈ ವರೆಗೆ ಫಲ ನೀಡಿಲ್ಲ.

ವಿಕ್ರಮ ಹೇಗೆ ಪ್ರತಿಸ್ಪಂದಿಸಬಹುದು ?

ವಿಕ್ರಮನ ತಲೆಯ ಮೇಲೆ ಗೋಪುರದಂಥ ರಚನೆ ಇದ್ದು ಅದು ಆಂಟೆನಾ. ಅದರಲ್ಲಿ ಟ್ರಾನ್ಸ್‌ಪಾಂಡರ್‌ಗಳಿದ್ದು ಇದರ ಮೂಲಕವೇ ವಿಕ್ರಮ ತನಗೆ ಬರುವ ಸಂಕೇತಗಳನ್ನು ಸ್ವೀಕರಿಸುತ್ತದೆ.ಇದನ್ನು ಅರ್ಥ ಮಾಡಿಕೊಂಡು ಅದಕ್ಕೆ ಪ್ರತ್ಯುತ್ತರ ಕಳಿಸಬಲ್ಲದು. ಆದರೆ ಇದುವರೆಗೆ ಆ ಕಡೆಯಿಂದ ಯಾವುದೇ ಸ್ಪಂದನೆ ಇಲ್ಲ. ಇದಕ್ಕೆ ಮುಖ್ಯವಾಗಿ ಬೇಕಾಗಿರುವುದು ಶಕ್ತಿ ಅಥವಾ ಇಂಧನ.

ಹಾಗಾದರೆ ವಿಕ್ರಮನಿಗೆ ಇಂಧನ ದೊರಕುವುದು ಎಲ್ಲಿಂದ ?: ವಿಕ್ರಮನ ಹೊರ ಕವಚದಲ್ಲಿ ಸೌರಫಲಕವಿದ್ದು ಅದೇ ಅದರ ಶಕ್ತಿ ಅಥವಾ ಇಂಧನದ ಮೂಲ. ನಿಗದಿಪಡಿಸಿದಂತೆ ಚಂದ್ರನ ಮೇಲೆ ವಿಕ್ರಮ ಇಳಿದಿದ್ದರೆ ಸೌರಫಲಕವನ್ನುಅನಾವರಣಗೊಳಿಸುತ್ತಿತ್ತು.ಆಗ ಅದು ಸೂರ್ಯನ ಶಕ್ತಿಯಿಂದ ಇಂಧನವನ್ನು ಉತ್ಪಾದಿಸುತ್ತಿತ್ತು. ಇದರ ಜತೆಗೆ ವಿಕ್ರಮನೊಳಗೆ ಬ್ಯಾಟರಿ ವ್ಯವಸ್ಥೆಯನ್ನೂ ಅಳವಡಿಸಲಾಗಿದ್ದು ಅದರಿಂದಲೂ ಇಂಧನ ಲಭ್ಯವಾಗಬೇಕಿತ್ತು.

ಆದರೆ ಒರಟಾದ ಲ್ಯಾಂಡಿಂಗ್‌ನ ಪರಿಣಾಮ ಈ ವ್ಯವಸ್ಥೆಗಳೆಲ್ಲವೂ ಹಾಳಾಗಿರುವ ಸಾಧ್ಯತೆ ಇದೆ. ಆದರೆ ಇಸ್ರೊ ಇನ್ನೂ ಅಂಕಿ ಅಂಶಗಳನ್ನು ಪರಿಶೀಲಿಸುತ್ತಿದ್ದು ಏನಾಗಿದೆ ಎಂಬುದನ್ನು ಇನ್ನಷ್ಟೇ ತಿಳಿಸಬೇಕಿದೆ.

ಇಸ್ರೊ ಎಷ್ಟು ದಿನಗಳ ವರೆಗೆ ಈ ಪ್ರಯತ್ನ ನಡೆಸಬಹುದು?: ಚಂದ್ರಯಾನ ಉಡಾವಣೆಗೆ ಮುನ್ನ ಇಸ್ರೊ ತನ್ನದೇ ಆದ ಲೆಕ್ಕಾಚಾರ ಮಾಡಿತ್ತು.ಅದರ ಪ್ರಕಾರ ಲ್ಯಾಂಡರ್‌ಗೆ ಸ್ಪಷ್ಟವಾದ ಸೂರ್ಯನ ಬೆಳಕು ದೊರೆಯುವುದು ಕೇವಲ ಒಂದು ಚಂದ್ರ ದಿನ.ಅಂದರೆ ಭೂಮಿಯ ಲೆಕ್ಕದಲ್ಲಿ 14 ದಿನ.ಇಷ್ಟು ದಿನಗಳ ಒಳಗಾಗಿ ಸಂಪರ್ಕ ಸಾಧ್ಯವಾದರೆ ಅದು ಕಾರ್ಯಾರಂಭ ಮಾಡಬಹುದು.ಇಲ್ಲವೆ ಸಂಪರ್ಕ ಅಸಾಧ್ಯ ಎಂಬುದು ಖಚಿತವಾದರೆ ಅದಕ್ಕೂ ಮುನ್ನವೇ ಆ ಪ್ರಯತ್ನವನ್ನು ಕೈಬಿಡಬಹುದು. ತದನಂತರದ ಮತ್ತೆ14 ದಿನಗಳ ಸುದೀರ್ಘ ಅವಧಿಯವರೆಗೆ ಅಲ್ಲಿ ಶೀತ ಸಹಿತ ಕಗ್ಗತ್ತಲು ಆವರಿಸಿರುತ್ತದೆ.

ತೆನಾಲಿ ಪರೀಕ್ಷೆ ತೇರ್ಗಡೆಯಾದ ಅತಿ ಕಿರಿಯ ಹುಡುಗ!

ದೆಹಲಿ: ಚಿಗುರು ಮೀಸೆಯೂ ಮೂಡದ 16 ವರ್ಷದ ಪೋರನೊಬ್ಬ 'ತೆನಾಲಿ ಪರೀಕ್ಷೆ'ಯ 14 ಹಂತಗಳನ್ನು ಪೂರೈಸಿದ ಅತಿ ಕಿರಿನಾಗಿದ್ದು ದಾಖಲೆಯನ್ನು ಸೃಷ್ಟಿಸಿದ್ದಾರೆ. ಶ್ರೀಮತಿ ಅಪರ್ಣಾ ಮತ್ತು ದೇವದತ್ತ ಪಾಟೀಲ್ ದಂಪತಿಗಳ ಪುತ್ರನಾದ ಪ್ರಿಯವ್ರತ, ಮಹಾ ಪರೀಕ್ಷೆಯನ್ನು ಉತ್ತೀರ್ಣನಾದ ಅತ್ಯಂತ ಕಿರಿಯನಾಗಿದ್ದಾನೆ.

ಈ ಕುರಿತು ಪ್ರತಿಕಿಯಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ಯುವಕನ ಸಾಧನೆಯನ್ನು ಪ್ರಶಂಸಿದ್ದಾರೆ. ಅಲ್ಲದೇ ಯುವಕನ ಸಾಧನೆಯು ಅನೇಕ ಮಂದಿಗೆ ಸ್ಫೂರ್ತಿಯಾಗಲಿದೆ ಎಮದು ಮೋದಿ ಟ್ವೀಟ್‌ನಲ್ಲಿ ಶ್ಲಾಘಿಸಿದ್ದಾರೆ. ಶ್ರೀಕಂಚಿ ವೇದ ವೇದಾಂತ ಶಾಸ್ತ್ರ ಸಭಾ 'ತೆನಾಲಿ ಪರೀಕ್ಷಾ' ಅನ್ನು ನಡೆಸುತ್ತದೆ. ಈ ಪರೀಕ್ಷೆಯು ಪ್ರತಿ ಆರು ತಿಂಗಳಿಗೊಮ್ಮೆ ನಡೆಯಲ್ಲಿದ್ದು, ನ್ಯಾಯ, ಮೀಮಾಂಸಾ, ವ್ಯಾಕರಣ, ಅದ್ವೈತ ಮತ್ತು ವೇದ ಭಾಷ್ಯಗಳಲ್ಲಿ ವಿಷಯವನ್ನು ಒಳಗೊಂಡಿರುತ್ತದೆ. ಪ್ರಿಯವ್ರತ ಅವರು ವೇದ ಮತ್ತು ನ್ಯಾಯವನ್ನು ತಮ್ಮ ತಂದೆ ಅವರಲ್ಲಿ ವ್ಯಾಸಂಗ ಮಾಡಿ, ಮತ್ತು ಎಲ್ಲಾ ವ್ಯಾಕರಣ ಮಹಾ ಗ್ರಂಥಗಳನ್ನು ಶ್ರೀ ಮೋಹನ ಶರ್ಮ ಅವರಲ್ಲಿ ಅಧ್ಯಯನ ಮಾಡಿದ್ದರು. ಇದೊಂದು ಅಸಾಧಾರಣವಾದ ಸಾಧನೆಯಾಗಿದ್ದು, 16 ವರ್ಷದ ಹುಡುಗನೊಬ್ಬ ಪೂರೈಸಿರುವುದು ಸೋಜಿಗವೆನಿಸಿದೆ. 40-50 ವರ್ಷಗಳ ಕಾಲ ಪರಿಶ್ರಮಪಟ್ಟು ವ್ಯಾಸಂಗ ಮಾಡಿದ ವಿದ್ವಾಂಸರಿಗೇ 14 ಹಂತದ ಶಾಸ್ತ್ರಪರೀಕ್ಷೆಯನ್ನು ಪೂರ್ಣಗೊಳಿಸುವುದು ಅತ್ಯಂತ ತ್ರಾಸದಾಯಕವಾಗಿರುತ್ತದೆ ಎಂದು ದೆಹಲಿ ವಿಶ್ವವಿದ್ಯಾನಿಲಯದ ಸಂಸ್ಕೃತ ವಿಭಾಗದ ಮುಖ್ಯಸ್ಥ ರಮೇಶ್ ಭಾರದ್ವಾಜ್ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಭಾರತ-ನೇಪಾಳ ಕೊಳವೆ ಮಾರ್ಗಕ್ಕೆ ಪ್ರಧಾನಿ ಚಾಲನೆ

ದೆಹಲಿ: ದಕ್ಷಿಣ ಏಷ್ಯಾದ ಮೊಟ್ಟ ಮೊದಲ ಗಡಿಯಾಚೆಗಿನ ಮೋತಿಹಾರಿ ಅಮ್ಲೆಖ್ಗುಂಜ್ ಪೆಟ್ರೋಲಿಯಂ ಉತ್ಪನ್ನಗಳ ಕೊಳವೆ ಮಾರ್ಗ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ನೇಪಾಳ ಪ್ರಧಾನಿ ಕೆ ಪಿ ಶರ್ಮಾ ಓಲಿ ಮಂಗಳವಾರ ವಿಡಿಯೋ ಕಾನ್ಫರೆನ್ಸ್ ಮೂಲಕ ಜಂಟಿಯಾಗಿ ಉದ್ಘಾಟಿಸಿದರು.

ಹೊಸ ಯೋಜನೆಯ ಆರಂಭದ ಮೂಲಕ ಉಭಯ ದೇಶಗಳ ನಡುವಣ ದ್ವಿಪಕ್ಷೀಯ ಬಾಂಧವ್ಯದಲ್ಲಿ ನವ ಸಂಚಲನ ಸೃಷ್ಟಿಯಾಗಲಿದೆ ಎಂದು ಯೋಜನೆಗೆ ಚಾಲನೆಗೆ ನೀಡಿದ ನಂತರ ಪ್ರಧಾನಿ ಮೋದಿ ಹೇಳಿದರು.

ಪೈಪ್ ಲೈನ್ ಯೋಜನೆಯಿಂದ ಉಭಯ ದೇಶಗಳ ನಡುವೆ ಅಂತರಿಕ ಸಂಪರ್ಕ, ಪರಸ್ಪರ ಅವಲಂಬನೆ ಹೆಚ್ಚಳಗೊಳ್ಳಲಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ, ವ್ಯಾಪಾರ ಹಾಗೂ ಸಾಗಣೆ ಸಂಪರ್ಕಕ್ಕೆ ಈ ಯೋಜನೆ ಒಂದು ಉತ್ತಮ ಉದಾಹರಣೆ ಎಂದು ನೇಪಾಳ ಪ್ರಧಾನಿ ಓಲಿ ಅಭಿಮತ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಆದಷ್ಟು ಶೀಘ್ರ ನೇಪಾಳಕ್ಕೆ ಭೇಟಿ ನೀಡಬೇಕೆಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆಹ್ವಾನ ನೀಡಿದ ನೇಪಾಳ ಪ್ರಧಾನಿ, ಸಮೃದ್ಧ ನೇಪಾಳಕ್ಕಾಗಿ ಭಾರತೀಯ ಸಹಭಾಗಿಯೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸಲು ತಾವು ಹೆಚ್ಚು ಉತ್ಸುಕರಾಗಿರುವುದಾಗಿ ಹೇಳಿದರು.

ನೇಪಾಳ ಭೇಟಿಗೆ ಪ್ರಧಾನಿ ಕೆ.ಪಿ. ಓಲಿ ಶರ್ಮಾ ಅವರು ನೀಡಿರುವ ಆಹ್ವಾನ ತಮಗೆ ತುಂಬಾ ಸಂತಸ ತಂದಿದ್ದು, ಆದಷ್ಟು ಶೀಘ್ರ, ಹಿಮಾಲಯದ ಪುಟ್ಟ ರಾಷ್ಟ್ರಕ್ಕೆ ಭೇಟಿ ನೀಡುವುದಾಗಿ ಮೋದಿ ಪ್ರಕಟಿಸಿದರು.

ಉಭಯ ದೇಶಗಳ ನಡುವೆ ಸಂಪರ್ಕ ಕಲ್ಪಿಸುವ ಇಂತಹ ಯೋಜನೆಗೆ ಚಾಲನೆ ನೀಡುತ್ತಿರುವ ಈ ಸಂದರ್ಭ ಅತ್ಯಂತ ಸಂತಸದ ಘಳಿಗೆ ಎಂದು ಮೋದಿ ಬಣ್ಣಿಸಿದರು.ನೇಪಾಳ ಹಾಗೂ ಭಾರತ ನಡುವೆ ಶತಶತಮಾನಗಳಿಂದ ಜನರ ನಡುವಣ ಅತ್ಯುತ್ತಮ ಬಾಂಧವ್ಯ ಅನುಭವಿಸುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು

ಇತ್ತೀಚಿನ ದಿನಗಳಲ್ಲಿ ಉಭಯ ದೇಶಗಳ ಉನ್ನತ ರಾಜಕೀಯ ಮಟ್ಟದಲ್ಲಿ ಬಾಂಧವ್ಯ ವೃದ್ದಿಸಿದ್ದು ಕಳೆದೊಂದೂವರೆ ವರ್ಷದಲ್ಲಿ ನೇಪಾಳ ಪ್ರಧಾನಿ ಅವರನ್ನು ತಾವು ನಾಲ್ಕು ಬಾರಿ ಭೇಟಿ ಯಾಗಿರುವುದಾಗಿ ಮೋದಿ ಹೇಳಿದರು.

ಲುಂಗಿ ಡ್ರೈವಿಂಗ್‌ಗೆ 2000 ದಂಡ; ಚಾಲಕ ಥಂಡಾ

ಲಖನೌ: ವಾಹನ ಚಾಲನೆ ನಿಯಮ ಉಲ್ಲಂಘನೆಗೆ ಹೊಸ ದಂಡ ಜಾರಿಗೆ ಬಂದಾಗಿನಿಂದ ದೇಶಾದ್ಯಂತ ಅಲ್ಲೋಲ ಕಲ್ಲೋಲ ಸೃಷ್ಟಿಯಾಗಿದೆ. ಚಿತ್ರ ವಿಚಿತ್ರವಾದ ಸುದ್ದಿಗಳು ಬರುತ್ತಿವೆ. ಸೆಪ್ಟೆಂಬರ್ 1 ರಂದು ಅದು ಜಾರಿಗೆ ಬಂದ ಮೊದಲ ದಿನವೇ ದೆಹಲಿಯ ವಾಹನ ಸವಾರನಿಗೆ 15 ಸಾವಿರ ರು.ದಂಡ ವಿಧಿಸಿದ ಸುದ್ದಿ ದೊಡ್ಡ ಸದ್ದು ಮಾಡಿತು.

ಮರುದಿನ ಸ್ಕೂಟರ್ ಸವಾರನೊಬ್ಬನಿಗೆ 23 ಸಾವಿರ ರು.ದಂಡ ವಿಧಿಸಿದಾಗ ಆತ 'ನನ್ನ ಸ್ಕೂಟರ್‌ನ ಈಗಿನ ಕಿಮ್ಮತ್ತೇ 15 ಸಾವಿರ ರು.23 ಸಾವಿರ ದಂಡ ಭರಿಸುವುದಕ್ಕೆ ಅರ್ಥವಿದೆಯೇ ಎಂಬ ವಾಸ್ತವಿಕ ಪ್ರಶ್ನೆ ಕೇಳಿದ್ದ. ಭಾರಿ ಜುಲ್ಮಾನೆಯಿಂದ ಆಕ್ರೋಶಗೊಂಡ ಮತ್ತುಬ್ಬ ಸವಾರ ತನ್ನ ಬೈಕಿಗೇ ಬೆಂಕಿ ಇಟ್ಟಿದ್ದಾನೆ.

ಇನ್ನೊಬ್ಬ ಲಾರಿ ಚಾಲಕನದು ಬೇರೊಂದು ಕಥೆ. ನಿಗದಿತ ತೂಕಕ್ಕಿಂತ ಹೆಚ್ಚಿನ ಸರಕು ಸಾಗಿಸುತ್ತಿದ್ದುದರಿಂದ ಆತನಿಗೆ 70 ಸಾವಿರ ರು. ಚಲನ್ ನೀಡಿದರು ಪೊಲೀಸರು. ಆದರೆ ಆತ ಚೌಕಾಶಿ ಮಾಡಿ 60 ಸಾವಿರ ರು.ಗೆ ವ್ಯವಹಾರ ಕುದುರಿಸಿದನಂತೆ.

ಲಖನೌದಿಂದ ಬಂದ ಮತ್ತೊಂದು ತಾಜಾ ಸುದ್ದಿ ಇನ್ನೂ ಮಜವಾಗಿದೆ. ಲಾರಿ ಚಾಲಕನನ್ನು ತಡೆದು ನಿಲ್ಲಿಸಿದ ಪೊಲೀಸರಿಗೆ ಆತ ಎಲ್ಲ ದಾಖಲೆಗಳನ್ನು ತೋರಿಸಿದರೂ ದಂಡ ತಪ್ಪಿಸಿಕೊಳ್ಳಲಾಗಲಿಲ್ಲ. 200 ರು. ಫೈನ್ ಜಡಿದೇ ಬಿಟ್ಟರು.

ಕಾರಣ ಏನು ಗೊತ್ತೆ ?

ಬಹಳ ವಿಚಿತ್ರ. ಗೊತ್ತಾದರೆ ನೀವೂ ನಗುತ್ತೀರಿ. ಆ ಡ್ರೈವರ್ ಲುಂಗಿ ಉಟ್ಟುಕೊಂಡು ವಾಹನ ಚಾಲನೆ ಮಾಡುತ್ತಿದ್ದನಂತೆ.

ಅರೆ ಇದೇನು ಎಂದಿರಾ ?

ಹೌದು ವಾಹನ ಚಾಲನೆ ಮಾಡಲು ಡ್ರೆಸ್ ಕೋಡ್ ಇರುತ್ತದೆ. ನಮ್ಮ ಆಟೊ ಚಾಲಕರು ಖಾಕಿ ಯೂನಿಫಾರ್ಮ್ ಧರಿಸಿರುತ್ತಾರೆ. ಹಾಗೆಯೇ ಟ್ರಕ್ ಮೊದಲಾದ ವಾಣಿಜ್ಯ ವಾಹನಗಳ ಚಾಲಕರು ಪ್ಯಾಂಟ್ ಹಾಗೂ ಫುಲ್ ಶರ್ಟ್ ಹಾಗೂ ಶೂ ಧರಿಸಿರಬೇಕು.

ಅಂದರೆ ವಾಹನ ದಾಖಲೆ ಮಾತ್ರವಲ್ಲ . ಈ ರೀತಿಯ ಇತರ ನಿಯಮಗಳನ್ನೂ ಪಾಲಿಸಬೇಕು. ಇಲ್ಲದಿದ್ದರೆ ದಂಡ ಖಚಿತ.

ಜೋಕ್...ಟ್ರೋಲ್

ಹೊಸ ದಂಡ ಪದ್ಧತಿ ಬಂದಾಗಿನಿಂದ ಜನರು ಭಯಭೀತರಾಗಿರುವುದ ಜೊತೆಗೆ ಅದಕ್ಕೆ ಭಾರಿ ವಿರೋಧವೂ ವ್ಯಕ್ತವಾಗ ತೊಡಗಿದೆ.

ರಸ್ತೆ ಸುರಕ್ಷತೆಯ ಹೆಸರಿನಲ್ಲಿ ಈ ಪಾಟಿ ದಂಡ ವಿಧಿಸುವುದು ಒಂದು ರೀತಿಯ ಸುಲಿಗೆ ಎಂದು ಅನೇಕರು ಹೇಳುತ್ತಿದ್ದಾರೆ. ರಸ್ತೆಗಳೇ ನೆಟ್ಟಗಿಲ್ಲ.

ಇನ್ನು ಇಷ್ಟೊಂದು ಫೈನ್ ಏಕೆ ಎಂದು ನೆಟ್ಟಿಗರು ಪ್ರಶ್ನಿಸುತ್ತಿದ್ದಾರೆ. ಇದರ ಕುರಿತು ಜೋಕ್‌ಗಳೂ, ಟ್ರೋಲ್‌ಗಳೂ ಸಾಮಾಜಿಕ ಜಾಲತಾಣಗಳಲ್ಲಿ ವಿಪರೀತವಾಗಿ ಹರಿದಾಡತೊಡಗಿವೆ.

ನಾನೂ ದಂಡ ಕಟ್ಟಿದ್ದೆ

ಇನ್ನು ಹೊಸ ವಾಹನ ಕಾಯಿದೆಯ ಪ್ರಬಲ ಪ್ರತಿಪಾದಕರಾಗಿರುವ ಕೇಂದ್ರ ಹೆದ್ದಾರಿ ಖಾತೆಯ ಸಚಿವ ನಿತಿನ್ ಗಡ್ಕರಿ ಅವರು ಇದನ್ನು ಬಲವಾಗಿ ಸಮರ್ಥಿಸುತ್ತಾರೆ. ಹೊಸ ಕಾಯಿದೆಯ ಮೂಲಕ ದುಡ್ಡು ಮಾಡುವ ಇರಾದೆ ಸರಕಾರಕ್ಕಿಲ್ಲ. ಬದಲಾಗಿ ರಸ್ತೆ ಸುರಕ್ಷತೆಯ ಸಲುವಾಗಿ ಈ ನಿಯಮ ಎನ್ನುತ್ತಾರೆ. ಮುಂಬೈನಲ್ಲಿ ತಾವು ಕೂಡ ಅಧಿಕ ವೇಗದಿಂದ ವಾಹನ ಚಲಾಯಿಸಿದ ಪ್ರಕರಣದಲ್ಲಿ ದಂಡ ಕಟ್ಟಿದ್ದೆ. ವ್ಯಕ್ತಿ ಎಷ್ಟೇ ದೊಡ್ಡವನಾಗಿದ್ದರೂ 'ಚಲನ್' ತಪ್ಪದು ಎಂದು ಪತ್ರಿಕಾ ಗೋಷ್ಠಿಯಲ್ಲಿ ಹೇಳಿದ್ದಾರೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: **VISHWESHWAR BHAT**, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers TVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : **Vishweshwar Bhat.** ಪ್ರಧಾನ ಸಂಪಾದಕ: **ವಿಶ್ವೇಶ್ವರ ಭಟ್**

CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.

ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:4, Issue:250